ಮರದಿಂದ ಉದುರಿದ ಪಾರಿಜಾತಗಳನ್ನು ನವಿರಾಗಿ ಎತ್ತಿಕೊಳ್ಳುವ ನಾಯಕಿ ಒಂದನ್ನು ಆಘ್ರಾಣಿಸಿ, ಮುಖವನ್ನೆಲ್ಲ ಅರಳಿಸುವಳು. ಹೂಬಟ್ಟಲಲ್ಲಿ ಎಲ್ಲವನ್ನೂ ಹಾಕಿಕೊಂಡು ತಾನು ತರಬೇತಿ ಪಡೆಯಲೆಂದು ಸೇರಿದ ಹೋಟೆಲ್ ಕೋಣೆಯ ಮೇಜಿನ ಮೇಲೆ ಇಟ್ಟು ಲೋಕವ್ಯಾಪಾರದಲ್ಲಿ ನಿರತಳಾಗುತ್ತಾಳೆ. ಸೋಮಾರಿಯಂತೆ ಮಲಗಿದ ನಾಯಕ ತನಗರಿವಿಲ್ಲದೇ ಹೂಬಟ್ಟಲನ್ನು ತಾಕಿಸಿ, ಕೆಳಗೆ ಬೀಳಿಸುತ್ತಾನೆ. 'ಹೂಗಳನ್ನು ಎತ್ತಿಡಬಾರದಿತ್ತೆ' ಎಂದಷ್ಟೇ ಹೇಳುವ ನಾಯಕಿಗೆ ಅವನ ಮೇಲೆ ಮೊದಲ ನೋಟದ ಪ್ರೇಮಾಂಕುರವೇನೂ ಆಗುವುದಿಲ್ಲ. ಇಷ್ಟದ ಹೂಗಳನ್ನು ಮತ್ತೆ ಅವಳು ತುಂಬತೊಡಗುತ್ತಾಳೆ. ಯಾವುದರ ಪರಿವೆಯೇ ಇಲ್ಲದಂತೆ ನಾಯಕ ಮತ್ತೆ ನಿದ್ರೆಗೆ ಜಾರುತ್ತಾನೆ.

★★★

ನಾಯಕಿ ಅದೇ ಹೋಟೆಲ್‌ನ ಮಹಡಿಯಿಂದ ಆಯತಪ್ಪಿ ಬೀಳುತ್ತಾಳೆ. ಬಿದ್ದ ರಭಸಕ್ಕೆ ಮಿದುಳಿಗೆ ದೊಡ್ಡ ಪೆಟ್ಟು. ಬೀಳುವ ಮೊದಲು ಅವಳು ನಾಯಕನ ಹೆಸರೆತ್ತಿ, ಅವನೆಲ್ಲಿ ಎಂದು ಕೇಳುತ್ತಾಳೆ. ಆ ಔತಣಕೂಟದಲ್ಲಿ ಅವನಿರುವುದಿಲ್ಲ. ಅಲ್ಲಿಂದ ಅವಳು ಆಸ್ಪತ್ರೆಯ ಹಾಸಿಗೆಯಲ್ಲಿ; ಪ್ರಜ್ಞೆ ಕಳೆದುಕೊಂಡ ಸ್ಥಿತಿಯಲ್ಲಿ.

★★★

ಪಾರಿಜಾತದ ಹೂಗಳನ್ನು ಬೀಳಿಸಿದ ನಾಯಕನ ಮನಸ್ಸು ಅರಳುವುದು ಅವಳು ಕೊನೆಯದಾಗಿ ತನ್ನ ಹೆಸರನ್ನೆತ್ತಿದಳು ಎನ್ನುವುದು ಕಿವಿಮೇಲೆ ಬಿದ್ದಾಗ. ಅವನು ನಾಯಕಿಯ ಆರೈಕೆ ತನ್ನದೇ ಉಸಾಬರಿ ಎಂಬ ನಿಲುವು ತಳೆಯುತ್ತಾನೆ. ವೃತ್ತಿಬದುಕು ರೂಪಿಸಿಕೊಳ್ಳುವುದನ್ನೂ ಬದಿಗೊತ್ತಿ, ಅವಳಲೋಕದ ಭಾಗವಾಗುವ ಅವನ ಮುಗ್ಧ ಪ್ರೇಮ ಅಂತರಂಗದ ಮೃಂದಂಗ ತೋಂತನನಾನ ಎನ್ನುವಂತೆ ಮಾಡುತ್ತದೆ.

★★★

ಒಂದೊಮ್ಮೆ ಅಕಸ್ಮಾತ್ತಾಗಿ ಹೂಬಟ್ಟಲ ಬೀಳಿಸಿದ್ದ ಅದೇ ಜೋಭದ್ರ ಪಾರಿಜಾತದ ಹೂಗಳನ್ನು ಹೆಕ್ಕಿ ತರುತ್ತಾನೆ. ಆಸ್ಪತ್ರೆ ಹಾಸಿಗೆಯ ಮೇಲೆ ಮಲಗಿದ ಪ್ರಜ್ಞಾಹೀನ ನಾಯಕಿಯ ಮೂಗಿಗೆ ತುಸು ದೂರ ಅವನ್ನು ಹರಡುತ್ತಾನೆ. ಆಘ್ರಾಣಿಸುವ ಅವಳಲ್ಲಿ ಸಣ್ಣ ಕದಲಿಕೆ. ಅವಳನ್ನು ಯಥಾಸ್ಥಿತಿಗೆ ತಂದೇ ತರುತ್ತೇನೆಂಬ ದಿವ್ಯವಾದ ಹಟ ಈ ಕುಚೇಲ ನಾಯಕನದ್ದು.

★★★

ಈ ನಾಯಕ ಅತಿ ಸಹಜ. ಬೈಕಿಗೆ ಪೆಟ್ರೋಲ್ ಹಾಕಿಸಲು ಆಗಾಗ ಕಾಸು ಇರುವುದಿಲ್ಲ. ಸಾಲ ಮಾಡುವಾಗಲೂ ಆತ್ಮಾಭಿಮಾನ ಮುಂದು ಮಾಡಿಯೇ ಕೇಳುವವರ ಪೈಕಿ. ಸ್ನೇಹಿತರ ಪ್ರಶ್ನೆಯ ನೋಟಗಳಿಗೆ ಸ್ಪಂದಿಸುತ್ತಲೇ ಅದನ್ನು ಧಿಕ್ಕರಿಸುವ ಧಾರ್ಷ್ಟ್ಯವನ್ನೂ ಸಹಜ ಪ್ರೇಮ ಅವನಲ್ಲಿ ತುಂಬಿದೆ. ಬೆನ್ನಮೇಲೊಂದು ಚೀಲ, ಕೈಯಲ್ಲೊಂದು ಹೆಲ್ಮೆಟ್ ಹಿಡಿದು ಕನಸುಗಳ ಅರಸುವ ಎಷ್ಟೋ ಮಧ್ಯಮವರ್ಗದ ಯುವಕರ ಪ್ರತಿನಿಧಿಯಂತೆ ಕಾಣುವ ಇವನು ಅವ್ಯಾಜಪ್ರೇಮದ ವಿಷಯದಲ್ಲಿ ಮಾತ್ರ ಎಲ್ಲರಂತಲ್ಲ. ಬದುಕುವುದೇ ಖಾತರಿ ಇಲ್ಲದ ಹುಡುಗಿಯನ್ನು ಈ ಪರಿಯಾಗಿ ಎಷ್ಟು ಮಂದಿ ಪ್ರೇಮಿಸಿಯಾರು?

★★★

ನಾಯಕಿಯ ಅಮ್ಮನಿಗೆ ಹೊಯ್ದಾಟ. ಆಸ್ಪತ್ರೆ ಖರ್ಚಿಗೆಂದು ಹಣ ಹೊಂದಿಸುವ ಕಷ್ಟ ಅವರಿಗಷ್ಟೇ ಗೊತ್ತು. ಉಳಿದ ಮಕ್ಕಳ ಜವಾಬ್ದಾರಿಯೂ ಅವರ ಮೇಲಿದೆ. ಎಚ್ಚರಿಸಲು